ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, I am on a point of order. Under Rule 347 "the Speaker may, direct any member whose conduct is, in his opinion gross, disorderly to withdraw immediately from the House and any member so ordered to withdraw shall do so forthwith..."

(ಗೊಂದಲ)

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಸದಸ್ಯರು ಬಾವಿಗೆ ಧರಣಿ ಮಾಡಲು ಬಂದರು)

ಶ್ರೀ ಸಿದ್ದರಾಮಯ್ಯ: where is the order in the House? No Point, No order.

(ಗೊಂದಲ)

ಅಧ್ಯಕ್ಷರು: ನಾನು ಮಾನ್ಯ ರೇವಣ್ಣನವರಲ್ಲಿ ಕೊನೆಯದಾಗಿ ವಿನಂತಿ ಮಾಡುತ್ತೇನೆ. ಈ ರೀತಿ ವರ್ತನೆಗಳು ಸರಿಯಲ್ಲ. ಇಲ್ಲದಿದ್ದರೆ ನಾನು ಹೆಸರನ್ನು ಹೇಳಿ ಹೊರಕ್ಕೆ ಕಳುಹಿಸಬೇಕಾಗುತ್ತದೆ. ನಿಮ್ಮ ಎಲ್ಲಾ ಸದಸ್ಯರುಗಳಿಗೆ ಹೇಳಿ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿನ್ನೆ ಮುಖ್ಯಮಂತ್ರಿಯವರು ಅಪ್ಪ ಮಕ್ಕಳದ್ದನ್ನು ಬಿಚ್ಚಿಡುತ್ತೇವೆಂದು ಹೇಳಿದ್ದರು. ಅದಕ್ಕೆ ನಾವೂ ಅವರ ಅಪ್ಪ ಮಕ್ಕಳದ್ದನ್ನು ಇಲ್ಲಿ ಬಿಚ್ಚಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರಿಗೊಂದು ನಮಗೊಂದು ಅಳತೆಗೋಲು ಇದೆಯೇ? ಇವರು ಸ್ವಲ್ಪ ದೊಡ್ಡ ಸೂಟ್‌ಕೇಸನ್ನು ತಂದಿದ್ದಾರೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಇಲ್ಲಿ misbehave ಮಾಡಬೇಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಅವರನ್ನು ದಯವಿಟ್ಟು ಹೊರಕ್ಕೆ ಹಾಕಿ.

(ಗೊಂದಲ)

ಅಧ್ಯಕ್ಷರು: ಕಾನೂನು ಸಚಿವರು motion ಅನ್ನು move ಮಾಡಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: (ಕಾನೂನು, ನ್ಯಾಯಾಂಗ, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಪೌರಾಡಳಿತ ಸಚಿವರು) ಮಾನ್ಯ ಅಧ್ಯಕ್ಷರೆ, I am on a point of order.

Rule 347:

"The Speaker may, direct any member whose conduct is, in his opinion gross, disorderly to withdraw immediately from the House, and any member so ordered to withdraw shall do so forthwith and shall absent himself during the remainder of the day's sitting".

ತಾವು ಎಷ್ಟು ಹೇಳಿದರೂ ಕೂಡ ಆ ರೀತಿ ಸಭಾಧ್ಯಕ್ಷರ ರೂಲಿಂಗ್‌ಗೆ ವಿರುದ್ಧವಾಗಿ, ಸಭೆಯ ಗೌರವಕ್ಕೆ ಕುಂದು ಬರುವಂತೆ ನಡೆದುಕೊಳ್ಳುತ್ತಿದ್ದಾರೆ. ದಯವಿಟ್ಟು ನಿಯಮ 347 ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಆಡಳಿತ ಪಕ್ಷದವರೇ ಇಂಥ ಕೆಟ್ಟ ಪ್ರವೃತ್ತಿ, ಕೆಟ್ಟ ಸಂಸ್ಕೃತಿ, ಕೆಟ್ಟ ಸಂಪ್ರದಾಯವನ್ನು ಪ್ರಾರಂಭ ಮಾಡಿದ್ದು. ಇಲ್ಲಿ placard ಗಳನ್ನು ಹಿಡಿದುಕೊಂಡು ಬಂದು ಪ್ರದರ್ಶನ ಮಾಡಿದವರೇ Ruling party ಯವರು. ಅವರ ಮೇಲೆ ನೀವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಭಾರತ್ ಬಂದ್ ದಿವಸ placard ಗಳನ್ನು ತೆಗೆದುಕೊಂಡು ಬಂದು ಬನಿಯನ್‌ಗಳನ್ನು ಹಾಕಿಕೊಂಡು ಬಂದು ಇಲ್ಲಿ ಪ್ರದರ್ಶನ ಮಾಡಿದರು. ಅದು ಬಹಳ ಸಭ್ಯಪಾದ ವರ್ತನೆಯೇ?

ಅಧ್ಯಕ್ಷರು: ಆ ದಿವಸವೂ ವಾರ್ನಿಂಗ್ ಕೊಟ್ಟದ್ದೇನೆ.

ಶ್ರೀ ಸಿದ್ದರಾಮಯ್ಯ: ಈಗ ಅವರೂ ಕೂಡ placard ಗಳನ್ನು ತಂದಿದ್ದರು. ಡಾಕ್ಯುಮೆಂಟ್ಸ್ ಅನ್ನು ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಸೂಟ್‌ಕೇಸ್‌ನಿಂದ ತೆಗೆದು ಎಲ್ಲಾ ಡಾಕ್ಯುಮೆಂಟ್ಸ್ ಇದೆ ಎಂದು ತೋರಿಸಿದರು. ನಮ್ಮ ಹತ್ತಿರವೂ ಇದೆಯೆಂದು ತಂದು ತೋರಿಸುತ್ತಿದ್ದಾರೆ. ಇದರಲ್ಲೇನಿದೆ? ನಿಯಮ 60ರಡಿಯಲ್ಲಿ ಚರ್ಚೆ ಮಾಡಲು ಇಡಲಿ. ಅವರದ್ದೂ ಇವರದ್ದೆಲ್ಲವನ್ನೂ ಚರ್ಚೆ ಮಾಡೋಣ. ಮೊದಲು ಆಡಳಿತ ಪಕ್ಷದವರೇ ಈ ದಾರಿಯನ್ನು ತೋರಿಸಿದವರು. ಅವರೂ ಕೂಡ ಅದನ್ನೇ ಮಾಡಿದ್ದಾರೆ. ಇದರಲ್ಲಿ ದೊಡ್ಡ ಅಪರಾಧವೇನಿಲ್ಲ. ಆದ್ದರಿಂದ ನಿಯಮ 347 ನೂ ಇಲ್ಲ, point of order ನೂ ಇಲ್ಲ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೇ.....

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸದನ ಸಮಿತಿ ವರದಿಯೆಲ್ಲಾ leak-out ಆಗಿದೆ. ಅದರ ಬಗ್ಗೆ ಈಗ ನಾವೊಂದು privilege-move ಮಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು: move ಮಾಡಿ

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಸೂಟ್‌ಕೇಸ್ ತಂದು ದಾಖಲೆ ಸಮೇತ ನಿಮ್ಮ ಅಪ್ಪ ಮಕ್ಕಳದ್ದು ಎಲ್ಲವನ್ನೂ ಬಹಿರಂಗ ಪಡಿಸುತ್ತೇನೆ ಎಂದಿದ್ದರು. ದಯಮಾಡಿ ಏನಿದೆ ಎಂಬುದು ಈ ರಾಜ್ಯದ ಜನತೆಗೆ ಗೊತ್ತಾಗಬೇಕು. ದೇವೇಗೌಡ ಇರಲಿ, ಕುಮಾರಸ್ವಾಮಿ ಇರಲಿ, ರೇವಣ್ಣ ಇರಲಿ, ಬಯಲು ಮಾಡಿ. ನಾವು ಅವರದ್ದೇನು ಇದೆಯೋ ಅದನ್ನು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ. ನಾವಲ್ಲ, ಮಾನ್ಯ ಮುಖ್ಯಮಂತ್ರಿಗಳೇ ಆಹ್ವಾನ ಮಾಡಿರುವುದು. ಮಾನ್ಯ ಮುಖ್ಯಮಂತ್ರಿಗಳೇ ಆಹ್ವಾನ ಮಾಡಿದ್ದಾರೆ. ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು

ಆಹ್ವಾನ ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಆಹ್ವಾನಕ್ಕೆ ನಾವು ಸಿದ್ಧರಿದ್ದೇವೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಾವು ನಿಮ್ಮ permision ಕೇಳುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರೇ, ನಿಮ್ಮನ್ನು ಭಕ್ತಿ ಪೂರ್ವಕವಾಗಿ ಕೇಳುತ್ತಿದ್ದೇವೆ, ನಿಯಮ 60 ರ ಅಡಿಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡುವ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ದಾಖಲೆ ಸಮೇತ ಚರ್ಚೆಯಾಗಬೇಕು ಎಂದು ಹೇಳಿದ್ದಾರೆ. ಆ ಚರ್ಚೆಯಾಗಲಿ. ನಿಯಮ 60 ರ ಅಡಿಯಲ್ಲಿ ಚರ್ಚೆ ನಡೆಸಲು ಅವಕಾಶ ಕೊಡುವ ಬಗ್ಗೆ ಪುನರ್ ಪರಿಶೀಲನೆ ನಡೆಸಬೇಕೆಂದು ಭಕ್ತಿ ಪೂರ್ವಕವಾಗಿ ಮತ್ತೊಮ್ಮೆ ಕೇಳುತ್ತೇವೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಆ 82 ಎಕರೆಯನ್ನು ಅವರೇ ತೆಗೆದುಕೊಂಡು ಬಿಡಲಿ. ಆ 82 ಎಕರೆ ಕಾನೂನು ಬಾಹಿರವಾಗಿ ತೆಗೆದುಕೊಂಡಿದ್ದರೆ, ಅದನ್ನು ಮಾನ್ಯ ಸಿದ್ದು ಸವದಿಯವರಿಗೇ ಬರೆದುಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು: ಈಗ ನಾನು ಇಲ್ಲಿ ಬಾವಿಯೊಳಗೆ ಇರುವಂತಹ ಎಲ್ಲಾ ಗೌರವಾನ್ವಿತ ಸದಸ್ಯರಿಗೆ ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ ಸದನದ ಕಲಾಪವನ್ನು ನಡೆಸಲಿಕ್ಕೆ ಅವಕಾಶ ಮಾಡಿ ಕೊಡಬೇಕೆಂಬ ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: Please, ಎಲ್ಲರೂ ಸಹಕರಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾವು ನಿಮಗೆ request ಮಾಡಿ, ಮಾಡಿ ಸಾಕಾಯಿತು. ನಾವು ನಿಮಗೆ ಬಹಳ request ಗಳನ್ನು ಮಾಡಿದೆವು.

ಅಧ್ಯಕ್ಷರು: ಅದು ಆಯಿತಲ್ಲಾ.

ಶ್ರೀ ಸಿದ್ದರಾಮಯ್ಯ: ನನಗನಿಸುತ್ತದೆ, ನೀವೂ ಕೂಡ ಬಹಳ ಕಠಿಣವಾಗಿ ಇದ್ದು ಬಿಟ್ಟಿದ್ದೀರಿ. ಸರ್ಕಾರದವರೂ ಕೂಡ ಬಹಳ prestige ಆಗಿ ತೆಗೆದುಕೊಂಡು ಬಿಟ್ಟಿದ್ದಾರೆ. ಚರ್ಚೆ ಮಾಡುವುದಕ್ಕೆ ಬಿಡಬಾರದು, ಇವರ ಬಣ್ಣ ಗೊತ್ತಾಗಿಬಿಡುತ್ತದೆ, ಬಯಲಾಗಿಬಿಡುತ್ತದೆ. ಮಾಡಿರುವ ತಪ್ಪುಗಳೆಲ್ಲಾ ಈ ರಾಜ್ಯದ 6 ಕೋಟಿ ಜನರಿಗೆ ಗೊತ್ತಾಗುತ್ತದೆ ಎಂದು ಅವರೂ ಕೂಡ ಒಪ್ಪುತ್ತಿಲ್ಲ. ಸುಮ್ಮನೆ ದಾಖಲಾತಿಗಳಿವೆ ಎಂದು ಮಾತನಾಡುತ್ತಿದ್ದಾರೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಮಗೆ ಕೊನೆಗೆ ಅಂತಿಮವಾಗಿ ಉಳಿದಿರತಕ್ಕದ್ದು, ನಮ್ಮ ಹೋರಾಟ 'ಯಡಿಯೂರಪ್ಪನವರ ಸರ್ಕಾರ ರಾಜೀನಾಮೆ ಕೊಡಬೇಕು. ಇವರು ಭ್ರಷ್ಟಾಚಾರದಲ್ಲಿ ಸಂಪೂರ್ಣ ಮುಳುಗಿದ್ದಾರೆ. ಸ್ವಜನ ಪಕ್ಷಪಾತದಲ್ಲಿ ಮುಳುಗಿದ್ದಾರೆ. ಅಕ್ರಮ ಗಣಿಕಾರಿಕೆಯಲ್ಲಿ ಸಾವಿರಾರು ಕೋಟಿ ರೂ.ಗಳು ರಾಜ್ಯದ ಬೊಕ್ಕಸಕ್ಕೆ ನಷ್ಟವಾಗಿದೆ. ಮಂತ್ರಿ ಮಂಡಲದ ಸದಸ್ಯರಿಂದ ಲೂಟಿ ನಡೆಯುತ್ತಿದೆ, ಮುಖ್ಯಮಂತ್ರಿಗಳಿಂದ ಲೂಟಿ ನಡೆಯುತ್ತಿದೆ. ಸ್ವಜನ ಪಕ್ಷಪಾತ, ಅಧಿಕಾರ ದುರುಪಯೋಗ ನಡೆಯುತ್ತಿದೆ. ಇವರು ಅಧಿಕಾರದಲ್ಲಿ ಉಳಿಯಲಿಕ್ಕೆ ಯಾವುದೇ ಹಕ್ಕಿಲ್ಲ. ಯಡಿಯೂರಪ್ಪನವರು ರಾಜೀನಾಮೆ ಕೊಡಬೇಕು. ಇವರ ಮಂತ್ರಿಮಂಡಲದ ಸದಸ್ಯರು ರಾಜೀನಾಮೆ ಕೊಡಬೇಕು. ಎಲ್ಲಾ ಹಗರಣಗಳನ್ನು ಸಿ. ಬಿ. ಐ. ಗೆ ವಹಿಸಬೇಕು. ಇದು ಈಡೇರುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ. ನಾವು ಈ ಸದನದಲ್ಲಿ ಭಾಗವಹಿಸುವುದಿಲ್ಲ. ನಾವು ನಿಮಗೆ ಸದನ ನಡೆಸಲಿಕ್ಕೆ ಬಿಡುವುದಿಲ್ಲ.....

(ಗೊಂದಲ)

ಅಧ್ಯಕ್ಷರು: ನಾನು ನಿಮಗೆ ಮತ್ತೆ ಮತ್ತೆ ವಿನಂತಿಯನ್ನು ಮಾಡುತ್ತೇನೆ. ದಯವಿಟ್ಟು ಎಲ್ಲಾ ಗೌರವಾನ್ವಿತ ಸದಸ್ಯರು ತಮ್ಮ ಸ್ಥಾನಗಳಿಗೆ ತೆರಳಿ ಕಲಾಪ ನಡೆಸಲಿಕ್ಕೆ ಅವಕಾಶ ಮಾಡಿಕೊಡಿ. ನಾನು ಮತ್ತೆ ಮತ್ತೆ ವಿನಂತಿಯನ್ನು ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಉತ್ತರ ಹೇಳಲಿಕ್ಕೆ ಸದನ ನಡೆಸಲಿಕ್ಕೆ ಇವರಿಗೆ ಯಾವುದೇ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು: ಈಗ ನಾನು ಕಾರ್ಯಕಲಾಪಗಳನ್ನು ಪ್ರಾರಂಭ ಮಾಡುತ್ತಿದ್ದೇನೆ. ಮೊದಲಿಗೆ ಪ್ರಶ್ನೋತ್ತರ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಈ ಭ್ರಷ್ಟ ಸರ್ಕಾರದ ಮಾತುಗಳನ್ನು ಹೇಳಿಕೆಗಳನ್ನು ಕೇಳುವುದಕ್ಕೆ ನಾವು ತಯಾರಾಗಿಲ್ಲ. ನಾವು ವಿರೋಧ ಮಾಡುತ್ತಿದ್ದೇವೆ. ಯಡಿಯೂರಪ್ಪನವರು ರಾಜೀನಾಮೆ ಕೊಡುವವರೆಗೂ ನಾವು ನಮ್ಮ ಧರಣಿಯನ್ನು ಮುಂದುವರೆಸುತ್ತೇವೆ.

(ಗೊಂದಲ)

[ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು ಸದನದ ಬಾವಿಯಲ್ಲಿ ಧರಣಿ ನಿರತರಾದರು]

ಅಧ್ಯಕ್ಷರು: ಈಗ ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು.

(ಗೊಂದಲ)

3. ಪ್ರಶ್ನೋತ್ತರ:

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ದಯವಿಟ್ಟುಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು: ಮಾನ್ಯ ರಮೇಶ್ ಬಂಡಿ ಸಿದ್ದೇಗೌಡರವರು.

(ಗೊಂದಲ)

ಅಧ್ಯಕ್ಷರು: ಮಾನ್ಯ ವಸಂತ ಬಂಗೇರಾರವರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಕಿಮ್ಮನೆ ರತ್ನಾಕರ್‌ರವರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಬಸವರಾಜ ಪಾಟೀಲ ಅಟ್ಟೂರ್‌ರವರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಯು.ಟಿ. ಖಾದರ್‌ರವರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಕೆ.ಪಿ.ಬಚ್ಚೇಗೌಡರವರು.

(ಗೊಂದಲ)

ಅಧ್ಯಕ್ಷರು: ಮಾನ್ಯ ನಾಡಗೌಡ ವೆಂಕಟರಾವ್‌ರವರು.